## ಅಕ್ಕನ ಹಾದಿಯಲ್ಲಿ ತಂಗಿ!

ಅಂತೆ– ಕಂತೆಗಳ ಪುರಾಣಕ್ಕೆ ಕೊನೆಗೂ ಕೊನೆ ಬಿದ್ದಿದೆ. ಕತ್ರೀನಾ ಕೈಫ್ ತಂಗಿ ಇಸಬೆಲ್ಲಾ ಕೈಫ್ ಬೆಳ್ಳಿಪರದೆ ಪ್ರವೇಶ ಖಚಿತವಾಗಿದೆ. ಅನಿಲ್ ಕಪೂರ್ ಪುತ್ರ ಹರ್ಷವರ್ಧನ್ ಎದುರು ಇಸಬೆಲ್ಲಾ ನಟಿಸುತ್ತಾರೆ ಎನ್ನಲಾಗಿತ್ತು. ಬಳಿಕ ನಿರ್ದೇಶಕ ಅಯಾನ್ ಮುಖರ್ಜಿ ಚಿತ್ರದ ಮೂಲಕ ಕತ್ರೀನಾ ತಮ್ಮ ಸಹೋದರಿಯನ್ನು ಪರಿಚಯಿಸುತ್ತಾರೆ ಎಂಬ ಸುದ್ದಿ ಹರಡಿತ್ತು. ಕೊನೆಗೆ ತಮ್ಮದೇ ಸ್ವಂತ ನಿರ್ಮಾಣ ಸಂಸ್ಥೆ ಮೂಲಕವೇ ಇಸಬೆಲ್ಲಾ ಪದಾರ್ಪಣೆಗೆ ಸಿದ್ಧತೆ ನಡೆಸಲಾಗಿದೆ ಎಂದೂ ಹೇಳಲಾಗಿತ್ತು.

ಈ ಎಲ್ಲಾ ಸುದ್ದಿಗಳಿಗೆ ಇದೀಗ ತೆರೆಬಿದ್ದಿದೆ. ಇಸಬೆಲ್ಲಾ ರಂಗಪ್ರವೇಶ ಆಗುತ್ತಿರುವುದು ಕೆನಡಾದ ಚಿತ್ರ 'ಡಾ. ಕಾಬ್ಬಿ' ಮೂಲಕ. ವಿಶೇಷವೆಂದರೆ ಕತ್ರೀನಾ ಹಳೆಯ ಗೆಳೆಯ ಸಲ್ಮಾನ್ ಈ ಚಿತ್ರದ ಸಹ ನಿರ್ಮಾಪಕ. ಅಂದ ಹಾಗೆ, ಇಸಬೆಲ್ಲಾಗೆ ಚೊಚ್ಚಲ ಚಿತ್ರದಲ್ಲಿ ನಾಯಕಿ ಪಾತ್ರವೇನೂ ಸಿಕ್ಕಿಲ್ಲ. ಆಕೆ ಅದರಲ್ಲಿ ಎರಡನೇ ನಾಯಕಿ. ಕೆನಡಾದ ಹೆಸರಾಂತ ನಿರ್ದೇಶಕ ಜೀನ್ ಫ್ರಾಂಕೊಯಿಸ್ ನಿರ್ದೇಶಿಸುತ್ತಿರುವ ಈ ಚಿತ್ರದ ಮೂಲಕ ಇಸಬೆಲ್ಲಾ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕೆನಡಾಕ್ಕೆ ತೆರಳುವ ಭಾರತದ ಯುವ ವೈದ್ಯನೊಬ್ಬ ಅಲ್ಲಿನ ಸ್ಥಳೀಯ ವೈದ್ಯಕೀಯ ಕಾಲೇಜುಗಳಿಂದ ತಿರಸ್ಕೃತನಾಗಿ ಟ್ಯಾಕ್ಸಿ ಚಾಲಕನ ಕೆಲಸ ಮಾಡುವಂತಾಗುವುದು ಚಿತ್ರದ ತಿರುಳು. ಅಕ್ಕನಂತೆಯೇ ಪುಟ್ಟ ಪಾತ್ರದ ಮೂಲಕ ಚಿತ್ರರಂಗಕ್ಕೆ ಕಾಲಿರಿಸುತ್ತಿರುವ ಇಸಬೆಲ್ಲಾಗೆ ಕತ್ರೀನಾರಂತೆ ಬೆಲ್ಲದ ಸವಿಯೋ ಅಥವಾ ಕಹಿ ಸಿಗುತ್ತದೋ ಕಾದುನೋಡಬೇಕು.



## ಪಾಪ, ಸಲ್ಲೂ ಭಾಯ್!



ಮದುವೆ ವಿಷಯದಲ್ಲಿ ಸಲ್ಮಾನ್ ಖಾನ್ ನಸೀಬು ನೆಟ್ಟಗಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವಂಥದ್ದೇ. ಯಾವುದೋ ನಟಿಯೊಂದಿಗೆ ಹೆಸರು ತಳುಕು ಹಾಕಿಕೊಂಡಾಗ, 'ಸದ್ಯ ಸಲ್ಲು ಭಾಯ್‌ಗೆ ಜೋಡಿ ಸಿಕ್ಕಿತಲ್ಲ' ಎಂದು ಬಾಲಿವುಡ್ ನಿಟ್ಟುಸಿರು ಬಿಡುತ್ತದೆ. ಕೆಲ ದಿನಗಳಲ್ಲೇ ಅದೇ ರಾಗ ಅದೇ ಹಾಡು!

ವಿಷಯ ಅದಲ್ಲ. ಚಿತ್ರರಂಗ ಮತ್ತು ಅಭಿಮಾನಿಗಳು ತಮ್ಮನ್ನು 'ಭಾಯ್' ಅನ್ನೋದನ್ನು ಕೇಳಿ ಕೇಳಿ ಸಲ್ಲೂ ರೋಸಿ ಹೋಗಿದ್ದಾರಂತೆ. ಹಾಗೆಂದು ಸ್ವತಃ ಸಲ್ಲೂ 'ಭಾಯ್' ಬಹಿರಂಗವಾಗಿ ಅಳಲು ತೋಡಿಕೊಂಡಿದ್ದಾರೆ. 'ನನಗೆ ನಾಲ್ವರು ಸಹೋದರಿಯರಿದ್ದಾರೆ. ಇಬ್ಬರು ನನ್ನ ಸ್ವಂತ ಸಹೋದರಿಯರು, ಇನ್ನಿಬ್ಬರು ರಾಖಿ ಸೋದರಿಯರು. ಇಷ್ಟು ಸಾಕು. ಇದಕ್ಕಿಂತ ಹೆಚ್ಚು ತಂಗಿಯರು ನನಗೆ ಬೇಡ' ಎಂದು ಇಷ್ಟು ದಿನ ಮನದೊಳಗೆ ಕುಳಿತಿದ್ದ ಬೇಸರವನ್ನು ಹೊರಹಾಕಿದ್ದಾರೆ ಸಲ್ಲು. 'ಯಾರಾದರೂ ಮುದ್ದಾದ ಹುಡುಗಿ ನನ್ನ ಬಳಿ ಬಂದು 'ಅಣ್ಣ' ಎಂದರೆ ತೀರಾ ಮುಜುಗರವಾಗುತ್ತದೆ. ಹಾಗೆ ಕರೆಯಬೇಡಿ ಎಂದು ಆಕೆಗೆ ಮನವಿ ಮಾಡುವಂತೆ ಪಕ್ಕದಲ್ಲಿ ಇರುವ ಗೆಳೆಯನಿಗೆ ಹೇಳುತ್ತೇನೆ' ಎಂದಿದ್ದಾರೆ ಸಲ್ಲು. ಪರಮಾಪ್ತ ಗೆಳತಿಯಾಗಿದ್ದ ಕತ್ರೀನಾ ಒಮ್ಮೆ 'ಸಲ್ಮಾನ್ ನನ್ನ ಅಣ್ಣನಿದ್ದಂತೆ' ಎಂದ ಬಳಿಕವಂತೂ ಸಲ್ಲೂ ದುಃಖ ಹೆಚ್ಚಾಗಿದೆ. ಅದನ್ನೀಗ ಅವರು ಬಹಿರಂಗವಾಗಿಯೇ ತೋಡಿಕೊಳ್ಳುವ ಮಟ್ಟಿಗೆ ಪರಿಸ್ಥಿತಿ ತಲುಪಿದೆ. ಪಾಪ ಸಲ್ಲೂ 'ಭಾಯ್'!

## ಇಮ್ರಾನ್‌ಗೆ 11 ಕೋಟಿ!



ಹಿಟ್ ಚಿತ್ರಗಳನ್ನು ನೀಡಿದ್ದರೂ ಬಾಲಿವುಡ್‌ನ ನವ ಚಾಕೊಲೇಟ್ ಹೀರೋ ಇಮ್ರಾನ್ ಖಾನ್ ಚಿತ್ರಗಳು ಕೋಟಿ ಕೋಟಿ ಬಾಚುವಷ್ಟು ಯಶಸ್ಸೇನೂ ಕಂಡಿಲ್ಲ. ಆದರೂ ಜನ ಈತ ಕೋಟಿ ಬಾಚುತ್ತಿರುವುದನ್ನು ಕಂಡು ಬೆರಗಾಗಿದ್ದಾರೆ. 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ' ಚಿತ್ರದ ಎರಡನೇ ಆವೃತ್ತಿಯಲ್ಲಿ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಳ್ಳಲು ಇಮ್ರಾನ್ ತೆಗೆದುಕೊಳ್ಳುತ್ತಿರುವ ಸಂಭಾವನೆ ಬರೋಬ್ಬರಿ 11 ಕೋಟಿ ರೂಪಾಯಿ! ಚಾಕೊಲೇಟ್ ಹೀರೋನಿಂದ ಗ್ಯಾಂಗ್‌ಸ್ಟರ್ ಆಗಿ ಬದಲಾಗುವ ಕಾರಣಕ್ಕೆ ಇಮ್ರಾನ್ ತುಟ್ಟಿಯಾಗಿರಬಹುದೇನೋ. ಅಂದ ಹಾಗೆ, ಈ ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ಅಕ್ಷಯ್ ಕುಮಾರ್ ಕಾಣಿಸಿಕೊಳ್ಳುತ್ತಿದ್ದಾರೆ. 'ಗ್ಯಾಂಗ್‌ಸ್ಟರ್' ಇಮ್ರಾನ್‌ಗೆ ಸೋನಾಕ್ಷಿ ಸಿನ್ಹಾ ನಾಯಕಿ.

■ ಅಮಿ